# ದಿನಾಂಕ: 23–09–2013 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಎಂ.ಮುನಿರಾಜು** | ಅಧ್ಯಕ್ಷರು | 1 | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ |
| 2 | **ವಿಜಯ ಎಸ್.ಎಸ್.ಪ್ರಸಾದ್** | ಸದಸ್ಯರು | 2 | ಮುಖ್ಯ ಅಭಿಯಂತರರು(ಕೆರೆಗಳು–ಪರಿಸರಕೋಶ) |
| 3 | **ಎಂ.ಸಿ.ಶ್ರೀನಿವಾಸ್** | ಸದಸ್ಯರು | 3 | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 4 | **ಆರ್.ಪಿ.ಶಶಿ** | ಸದಸ್ಯರು | 4 | ಉಪ ಅರಣ್ಯ ಸಂರಕ್ಷಣಾಧಿಕಾರಿ |
| 5 | **ಪುಟ್ಟಮ್ಮ** | ಸದಸ್ಯರು | 5 | ವಲಯ ಅರಣ್ಯಾಧಿಕಾರಿಗಳು(ಪೂರ್ವ/ಪಶ್ಚಿಮ/ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 6 | **ಎಸ್.ಹೆಚ್.ಪದ್ಮರಾಜ್** | ಸದಸ್ಯರು | | |
| 7 | **ಎಸ್.ಗಂಗಾಧರ್** | ಸದಸ್ಯರು | 6 | ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 8 | **ಕೆ.ಆರ್.ಯಶೋಧಮ್ಮ** | ಸದಸ್ಯರು | | |
| 9 | **ಪಳನಿಯಮ್ಮಾಳ್** | ಸದಸ್ಯರು | 7 | ಕಾ.ಪಾ.ಅ.(ಯೋಜನೆ–ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ) |
| 10 | **ಲಲಿತಾ** | ಸದಸ್ಯರು | 8 | ಕಾರ್ಯಪಾಲಕ ಅಭಿಯಂತರರು(ಯೋಜನೆ–ಕೆರೆಗಳು) |

**ಮಾನ್ಯ ಅಧ್ಯಕ್ಷರು** ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿ, ಹಾಜರಿರುವ ಎಲ್ಲಾ ಅಧಿಕಾರಿಗಳು ಮತ್ತು ಸಮಿತಿ ಸದಸ್ಯರು ತಮ್ಮ ತಮ್ಮ ಪರಿಚಯವನ್ನು ಸಭೆಗೆ ಮಾಡಿಕೊಡುವಂತೆ ಸೂಚಿಸಿದರು. ಅದರಂತೆ, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳು ತಮ್ಮ ತಮ್ಮ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು.

## ತೋಟಗಾರಿಕೆ ಇಲಾಖೆ

**ಅಧ್ಯಕ್ಷರು,** ತೋಟಗಾರಿಕೆ ಅಧೀಕ್ಷಕರುಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಪಾಲಿಕೆ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಒಟ್ಟು ಎಷ್ಟು ಉದ್ಯಾನವನಗಳಿವೆ, ಅವುಗಳಲ್ಲಿ ಗುತ್ತಿಗೆದಾರರಿಂದ ಹಾಗೂ ಖಾಸಗಿ ಸಂಘ–ಸಂಸ್ಥೆಯಿಂದ ನಿರ್ವಹಣೆ ಮಾಡುತ್ತಿರುವ ಉದ್ಯಾನವನಗಳೆಷ್ಟು? (ಸರ್ಕಲ್ ಮತ್ತು ಮೀಡಿಯನ್ಸ್‌ಗಳು ಹಾಗೂ ಬುಲೇ ವಾರ್ಡ್‌ಗಳನ್ನು ಒಳಗೊಂಡಂತೆ) ಹಾಗೂ ಯಾವ ದಿನಾಂಕದಿಂದ ನಿರ್ವಹಣೆಗೆ ಆದೇಶ ನೀಡಲಾಗಿದೆ ಹಾಗೂ ಪಾಲಿಕೆ ವತಿಯಿಂದ ನಿರ್ವಹಣೆ ಮಾಡುತ್ತಿರುವ ಉದ್ಯಾನವನಗಳೆಷ್ಟು? ಎಷ್ಟು ಉದ್ಯಾನವನಗಳಲ್ಲಿ ಭದ್ರತಾ ವ್ಯವಸ್ಥೆಯನ್ನು ಒದಗಿಸಲಾಗಿದೆ? ಭದ್ರತಾ ವ್ಯವಸ್ಥೆ ಇಲ್ಲದಿರುವ ಉದ್ಯಾನವನಗಳೆಷ್ಟು? ಸಾರ್ವಜನಿಕರಿಗೆ ವಾಯುವಿಹಾರಕ್ಕೆ ನಿಗಧಿತ ಸಮಯವನ್ನು ನಿಗಧಿಗೊಳಿಸಿರುವ ಉದ್ಯಾನವನಗಳೆಷ್ಟು? ಎಷ್ಟು ಉದ್ಯಾನವನಗಳಲ್ಲಿ ಟ್ರೀಪಾರ್ಕ್ ಮಾಡಲಾಗಿದೆ, ಎಷ್ಟು ಉದ್ಯಾನವನಗಳಲ್ಲಿ ಮಕ್ಕಳ ಆಟದ ಸಲಕರಣೆಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿವೆ,

ಮಕ್ಕಳ ಆಟದ ಸಲಕರಣೆಗಳ ಅವಶ್ಯಕತೆ ಇರುವ ಉದ್ಯಾನವನಗಳೆಷ್ಟು ಎಂಬ ಬಗ್ಗೆ ಒಂದು ವಾರದೊಳಗೆ ಮಾಹಿತಿಯನ್ನು ಸಮಿತಿಗೆ ನೀಡುವಂತೆ ಸೂಚಿಸಿದರು.

ಬೆಂಗಳೂರಿನಲ್ಲಿ, ಇತ್ತೀಚಿನ ದಿನಗಳಲ್ಲಿ ಬೆಳಿಗ್ಗೆ ಹಾಗೂ ಸಾಯಂಕಾಲದ ಸಮಯದಲ್ಲಿ ಉದ್ಯಾನವನಗಳಲ್ಲಿ ವಾಯುವಿಹಾರಕ್ಕೆ ಹಿರಿಯ ನಾಗರೀಕರು, ಸಾರ್ವಜನಿಕರು ಹಾಗೂ ಪುಟ್ಟ ಮಕ್ಕಳು ಉದ್ಯಾನವನಗಳಲ್ಲಿ ಆಟವಾಡಲು ಹೆಚ್ಚಾಗಿ ಬರುತ್ತಿರುವುದರಿಂದ, ಅವುಗಳ ನಿರ್ವಹಣೆ ಅಂದರೆ ಉದ್ಯಾನವನಗಳಲ್ಲಿ ಅಳವಡಿಸಿರುವ ಗೇಟ್‌ಗಳು, ಪಾತ್‌ವೇಗಳು, ಬೆಂಚುಗಳು, ಮಕ್ಕಳ ಆಟದ ಸಾಮಗ್ರಿಗಳು, ಬೋರ್‌ವೆಲ್‌ಗಳು ಹಾಳಾಗಿದ್ದರೆ ಪರಿಶೀಲಿಸಿ, ದುರಸ್ಥಿಗೊಳಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಹಾಗೂ ಪಾಲಿಕೆಯಿಂದ ಉದ್ಯಾನವನಗಳಿಗಾಗಿ ಸಾಕಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದು, ಉದ್ಯಾನವನಗಳಲ್ಲಿ ದನಕರುಗಳು ನುಗ್ಗಿ ಹಾಳು ಮಾಡದಂತೆ ಎಲ್ಲಾ ಉದ್ಯಾನವನಗಳಿಗೆ ಭದ್ರತಾ ವ್ಯವಸ್ಥೆಯನ್ನು ಒದಗಿಸುವಂತೆ ಸೂಚಿಸಿದರು.

ಹಾಲಿ ಪ್ರಗತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯಾನವನಗಳ ಕಾಮಗಾರಿಗಳ ವಿವರ ಹಾಗೂ ಈಗಾಗಲೇ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಹಣ ಪಾವತಿಗಾಗಿ ಕಾಯ್ದಿರಿಸಿರುವ ಕಾಮಗಾರಿಗಳ ವಿವರವನ್ನು ವಲಯವಾರು ಮಾಹಿತಿಯನ್ನು ಸಮಿತಿಗೆ ನೀಡುವಂತೆ ಸೂಚಿಸಿದರು.

ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಲು, 2013–14ನೇ ಸಾಲಿನ ಆಯವ್ಯಯದಲ್ಲಿ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಕ್ರಮ ಪಟ್ಟಿ(ಪಿ.ಓ.ಡಬ್ಲ್ಯೂ.) ಯನ್ನು ತಯಾರಿಸಿ, ಸಮಿತಿಯ ಅನುಮೋದನೆ ಪಡೆಯುವಂತೆ ಸೂಚಿಸಿದರು.

ಪೂಜ್ಯ ಮಹಾಪೌರರ ಅನುದಾನ, ಮಾನ್ಯ ಉಪ ಮಹಾಪೌರರ ಅನುದಾನ ಹಾಗೂ ಮಾನ್ಯ ಉಸ್ತುವಾರಿ ಸಚಿವರ ಅನುದಾನ ಮತ್ತು ತೋಟಗಾರಿಕೆ ಸ್ಥಾಯಿ ಸಮಿತಿಗೆ ಕಾಯ್ದಿರಿಸಿರುವ ಅನುದಾನದಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿರುವ ಮತ್ತು ಪ್ರಗತಿಯಲ್ಲಿರುವ ಉದ್ಯಾನವನ ಕಾಮಗಾರಿಗಳ ಬಗ್ಗೆ ವಲಯವಾರು ಮಾಹಿತಿಯನ್ನು ಸಮಿತಿಗೆ ನೀಡುವಂತೆ ಸೂಚಿಸಿದರು.

**ಶ್ರೀ.ಮಹಮದ್ ಅಲೀ, ತೋಟಗಾರಿಕೆ ಅಧೀಕ್ಷಕರು(ಯಲಹಂಕ)**ರವರು ಮಾತನಾಡುತ್ತಾ, ಏಳು ಉದ್ಯಾನವನಗಳಲ್ಲಿ ಮೂರು ಬೋರ್‌ವೆಲ್‌ಗಳಿವೆ, ಬೋರ್‌ವೆಲ್ ಇಲ್ಲದೇ ಇರುವ ಕಡೆ ಟ್ರೀಪಾರ್ಕ್‌ಗಳನ್ನು ಮಾಡಲಾಗಿದೆ. ಕೆಲವು ಕಡೆ ಸಂಪ್‌ಗಳಿವೆ, ಕೆಲವು ಕಡೆ ಇಲ್ಲ, ನೀರು ಎಲ್ಲಾ ಗಿಡಗಳಿಗೆ ಸಾಕಾಗುವುದಿಲ್ಲವೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಎಷ್ಟು ಬೋರ್‌ವೆಲ್‌ಗಳ ಅವಶ್ಯಕತೆ ಇದೆ ಎಂಬ ಬಗ್ಗೆ ವಿವರ ನೀಡುವಂತೆ ಸೂಚಿಸಿದರು ಹಾಗೂ ಉದ್ಯಾನವನಗಳಲ್ಲಿ ಲಕ್ಷಾಂತರ ಹಣ ವೆಚ್ಚ ಮಾಡಿ ವಿದ್ಯುತ್ ಲೈಟ್ ಹಾಕಿದ್ದು, ಅವುಗಳ ನಿರ್ವಹಣೆ ಸಮರ್ಪಕವಾಗಿಲ್ಲವೆಂದು ತಿಳಿಸಿದರು.

***ಶ್ರೀ.ಬ್ರಿಜೇಶ್ ಕುಮಾರ್, ಅರಣ್ಯ ಸಂರಕ್ಷಣಾಧಿಕಾರಿ*** : ಉದ್ಯಾನವನಕ್ಕೆ ಸಂಬಂಧಪಟ್ಟಂತೆ ಎಲ್ಲಾ ಉದ್ಯಾನವನಗಳ ನಿರ್ವಹಣೆ/ಅಭಿವೃದ್ಧಿ ಕಾಮಗಾರಿ ಕೆಲಸಗಳು ಒಬ್ಬ ಅಧಿಕಾರಿಯ ಹಿಡಿತದಲ್ಲಿದ್ದರೆ ಕೆಲಸಗಳು ಸುಗಮವಾಗಿರುತ್ತವೆ. ಈ ಹಿಂದೆ ತೋಟಗಾರಿಕೆಗೆ ಸಂಬಂಧಪಟ್ಟಂತೆ ಕೆಲಸ ಕಾರ್ಯವನ್ನು ಜಂಟಿ ನಿರ್ದೇಶಕರು(ತೋಟಗಾರಿಕೆ)ರವರು ನಿರ್ವಹಿಸುತ್ತಿದ್ದು, ಅವರಿಂದ ಎಲ್ಲಾ ಮಾಹಿತಿಗಳನ್ನು ಪಡೆದುಕೊಳ್ಳಲು ಅನುಕೂಲವಾಗುತ್ತಿತ್ತು. ಈಗ ಆ ಹುದ್ದೆಯಲ್ಲಿ ಯಾರು ಇರುವುದಿಲ್ಲವೆಂದು ತಿಳಿಸಿದರು. ಈಗ ವಿದ್ಯುತ್, ಸಿವಿಲ್ ಕಾಮಗಾರಿಗಳನ್ನು ಇಂಜಿನಿಯರಿಂಗ್ ವಿಭಾಗದವರಿಗೆ ವಹಿಸಲಾಗಿದೆ ಎಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಉದ್ಯಾನವನಕ್ಕೆ ಸಂಬಂಧಪಟ್ಟ ಹಾಗೆ ಒಬ್ಬ ನುರಿತ ಅಧಿಕಾರಿಗೆ ಜವಾಬ್ದಾರಿಯನ್ನು ನೀಡಿದಲ್ಲಿ ಯಾವುದೇ ಮಾಹಿತಿಯನ್ನು ಅವರಿಂದ ಪಡೆಯಲು ಅನುಕೂಲವಾಗುವ ನಿಟ್ಟಿನಲ್ಲಿ, ತೋಟಗಾರಿಕೆಗೆ ಸಂಬಂಧಪಟ್ಟಂತೆ ಒಬ್ಬ ದಕ್ಷ ಅಧಿಕಾರಿಯ ಹೆಸರನ್ನು ಆಯ್ಕೆ ಮಾಡಿ ನೀಡಿದಲ್ಲಿ, ಸಮಿತಿಯ ಸದಸ್ಯರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಸೂಚಿಸಿದರು.

## ***ಅರಣ್ಯ ಇಲಾಖೆ***

**ಅಧ್ಯಕ್ಷರು,** ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ ಮಾತನಾಡುತ್ತಾ, ಈಗಾಗಲೇ ಮಳೆಗಾಲ ಪ್ರಾರಂಭವಾಗಿ ಕೊನೆಗೊಳ್ಳುತ್ತಿರುವ ಪ್ರಯುಕ್ತ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಟದ ಮೈದಾನ, ಉದ್ಯಾನವನ, ಕೆರೆ ಅಂಗಳ, ಪಾದಚಾರಿ ಮಾರ್ಗ ಹಾಗೂ ಸರ್ಕಾರಿ ಜಾಗಗಳಲ್ಲಿ ಸಸಿ ನೆಡುವ ಬಗ್ಗೆ ಹಾಗೂ ಇವುಗಳಿಗೆ ಸಂಬಂಧಪಟ್ಟ ಹಾಗೆ ಎಷ್ಟು ಟೆಂಡರ್ ಕರೆಯಲಾಗಿದೆ ಹಾಗೂ ಕರೆಯಬೇಕಾಗಿದೆ ಮತ್ತು ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬ ವಿವರಗಳನ್ನು ಸಮಿತಿಗೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆಯ 198 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರಿಗೆ, ವಾಹನ ಸಂಚಾರಕ್ಕೆ ಅಡಚಣೆ ಉಂಟು ಮಾಡುವಂತಹ ಮರಗಳು ಹಾಗೂ ಅಪಾಯಕಾರಿ ಮರ ಮತ್ತು ರೆಂಬೆಗಳು ಹಾಗೂ ಶಿಥಿಲಗೊಂಡ ಮರಗಳನ್ನು ಗುರುತಿಸಿ ಕೂಡಲೇ ತೆಗೆಯಲು ಕ್ರಮ ವಹಿಸುವಂತೆ ಯಾವುದೇ ಕಾಮಗಾರಿಗಳು Spill over work ಆಗದ ರೀತಿಯಲ್ಲಿ ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ನರ್ಸರಿಗಳಿವೆ, ಅವುಗಳಲ್ಲಿರುವ ಸಸಿಗಳ ಸಂಖ್ಯೆ ಹಾಗೂ ಪಾಲಿಕೆಯ 198 ವಾರ್ಡ್‌ಗಳಲ್ಲಿ ಮುಂದುವರೆದ ಕಾಮಗಾರಿಗಳಲ್ಲಿ, ರಸ್ತೆ ಬದಿಗಳಲ್ಲಿ ಎಷ್ಟು ಗಿಡಗಳನ್ನು ನೆಡಲಾಗಿದೆ, ಅವುಗಳ ಸಂಖ್ಯೆ ಹಾಗೂ ಎಷ್ಟು ಮರಗಳನ್ನು ತೆಗೆಯಲಾಗಿದೆ,

ಮರಗಳನ್ನು ತೆಗೆದಿರುವ ಸ್ಥಳದ ವಿವರಗಳ ಮಾಹಿತಿಯನ್ನು ವಲಯವಾರು ಸಮಿತಿಗೆ ನೀಡುವಂತೆ ಸೂಚಿಸಿದರು.

***<u>ಶ್ರೀ.ಬ್ರಿಜೇಶ್ ಕುಮಾರ್, ಅರಣ್ಯ ಸಂರಕ್ಷಣಾಧಿಕಾರಿ</u>*** *: ಕಳೆದ ಮೂರು ನಾಲ್ಕು ವರ್ಷಗಳಿಂದ ಮಾನ್ಸೂನ್ ಮಳೆ ಮುಗಿದ* ಮೇಲೂ ಸಹ ಕೂಡ ಗಿಡಗಳನ್ನು ನೆಡಲಾಗಿದೆ. ಏಕೆಂದರೆ, ಪ್ರೋಸಿಜರ್ ಕಂಪ್ಲೀಟ್ ಆಗಿಲ್ಲ, ಕೆಲವು ಕಡೆ ಖಾಸಗಿ ಸಂಸ್ಥೆಯಿಂದ ಸಸಿಗಳನ್ನು ನೆಡಲಾಗಿದೆ. ಟೆಂಡರ್ ಕರೆದು ಕಡತಗಳ ವ್ಯವಹರಣೆಯಲ್ಲಿ ವಿಳಂಬವಾದರೆ ಈ ಹಿಂದೆ ನಿರ್ವಹಣೆ ಮಾಡುತ್ತಿದ್ದ ಗುತ್ತಿಗೆದಾರರ ಮೂಲಕ ಸಸಿಗಳನ್ನು ನೆಡಸಿ, ಅದರ ನಿರ್ವಹಣೆ, ಪೋಷಣೆಯ ಜವಾಬ್ದಾರಿಯನ್ನು ಅವರೇ ಮುಂದುವರೆಸಿಕೊಂಡು ಹೋಗುವ ವ್ಯವಸ್ಥೆಯನ್ನು ಮಾಡಲಾಗಿದೆ. ಕೋಡ್ ನೀಡುವುದರಲ್ಲಿ ವಿಳಂಬವಾಗುತ್ತಿರುವುದರಿಂದ ಕೆಲಸ ಕಾರ್ಯಗಳಿಗೆ ತುಂಬಾ ಆಡಚಣೆ ಉಂಟಾಗಿರುತ್ತದೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಕಾಮಗಾರಿಗಳ ವರ್ಕ್ ಕೋಡ್‌ಗೆ ಯಾವ ಯಾವ ಕಡತಗಳು ಬಾಕಿ ಇವೆ ಎಂಬುದನ್ನು ಪಟ್ಟಿ ಮಾಡಿ ಸಮಿತಿಗೆ ಸಲ್ಲಿಸುವಂತೆ, ಈ ಕುರಿತು ಮುಖ್ಯ ಲೆಕ್ಕಾಧಿಕಾರಿಗಳೊಂದಿಗೆ ಚರ್ಚಿಸಿ ವರ್ಕ್‌ಕೋಡ್ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಸೂಚಿಸಿದರು.

2013-14ನೇ ಸಾಲಿನ ಆಯವ್ಯಯದಲ್ಲಿ ನಗರ ವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ, ಕಾರ್ಯಕ್ರಮ ಪಟ್ಟಿ (ಪಿ.ಓ.ಡಬ್ಲ್ಯೂ.) ಯನ್ನು ತಯಾರಿಸಿ, ಸಮಿತಿಯ ಅನುಮೋದನೆ ಪಡೆಯುವಂತೆ ಸೂಚಿಸಿದರು ಹಾಗೂ ಈಗಾಗಲೇ ಕಾಮಗಾರಿ ಪೂರ್ಣಗೊಂಡಿದ್ದು, ಹಣ ಪಾವತಿಗಾಗಿ ಕಾಯ್ದಿರಿಸಿರುವ ಕಾಮಗಾರಿಗಳ ವಿವರವನ್ನು ವಲಯವಾರು ಮಾಹಿತಿಯನ್ನು ಸಮಿತಿಗೆ ನೀಡುವಂತೆ ಸೂಚಿಸಿದರು.

ಪೂಜ್ಯ ಮಹಾಪೌರರ ಅನುದಾನ, ಮಾನ್ಯ ಉಪ ಮಹಾಪೌರರ ಅನುದಾನ ಹಾಗೂ ಮಾನ್ಯ ಉಸ್ತುವಾರಿ ಸಚಿವರ ಅನುದಾನ ಮತ್ತು ತೋಟಗಾರಿಕೆ ಸ್ಥಾಯಿ ಸಮಿತಿಗೆ ಕಾಯ್ದಿರಿಸಿರುವ ಅನುದಾನದಲ್ಲಿ, ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಿಸಿದಂತೆ, ಅಭಿವೃದ್ಧಿಪಡಿಸಿರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಮಾಹಿತಿಯನ್ನು ಒಂದು ವಾರದೊಳಗೆ ಸಮಿತಿಗೆ ಮಾಹಿತಿ ನೀಡುವಂತೆ ತಿಳಿಸಿದರು.

## <u>ಕೆರೆಗಳು-ಪರಿಸರ ಕೋಶ</u>

**ಅಧ್ಯಕ್ಷರು** ಕೆರೆಗಳು-ಪರಿಸರ ಕೋಶಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಮಾತನಾಡುತ್ತಾ, ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ

ಉದ್ಯಾನವನಗಳಿಗಿಂತಲೂ ಮುಖ್ಯವಾಗಿ ಕೆರೆಗಳು ನಮ್ಮ ಜೀವನಾಡಿಯಾಗಿರುತ್ತದೆ. ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಕೆರೆಗಳಿವೆ? ಅವುಗಳಲ್ಲಿ ಎಷ್ಟು ಕೆರೆಗಳನ್ನು ಈಗಾಗಲೇ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಪ್ರಗತಿಯಲ್ಲಿರುವ ಕೆರೆಗಳ ಕಾಮಗಾರಿಗಳೆಷ್ಟು ಹಾಗೂ ಬಿ.ಡಿ.ಎ. ವತಿಯಿಂದ ಮತ್ತು ಖಾಸಗಿ ಸಂಸ್ಥೆಯಿಂದ ಸಮಗ್ರವಾಗಿ ಅಭಿವೃದ್ಧಿಗೊಳಿಸುತ್ತಿರುವ ಕೆರೆಗಳ ಬಗ್ಗೆ ಹಾಗೂ ಅದರಲ್ಲಿ ಎಷ್ಟು ಕೆರೆಗಳಿಗೆ ಎಸ್.ಟಿ.ಪಿ. ವ್ಯವಸ್ಥೆ ಆಳವಡಿಸಲಾಗಿದೆ ಹಾಗೂ ಎಸ್.ಟಿ.ಪಿ. ಅಳವಡಿಸಿರುವ ಕೆರೆಗಳಿಂದ ನೀರು ಪುನರ್ ಬಳಕೆ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಸಮಿತಿಗೆ ಒದಗಿಸಲು ಸೂಚಿಸಿದರು.

***ಶ್ರೀ.ಸತೀಶ್, ಮುಖ್ಯ ಅಭಿಯಂತರರು(ಕೆರೆಗಳು–ಪರಿಸರಕೋಶ)*** ರವರು ಮಾತನಾಡುತ್ತಾ, ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 183 ಕೆರೆಗಳಿವೆ, ಅದರಲ್ಲಿ 55 ಪಾಲಿಕೆ ವಶದಲ್ಲಿದೆ, 118 ಬಿಡಿಎ ನಿರ್ವಹಿಸುತ್ತಿದೆ., ಲೇಕ್ ಡೆವಲಫ್‌ಮೆಂಟ್ ಇಲಾಖೆಯಿಂದ 7 ಕೆರೆಗಳು ಹಾಗೂ ಫಾರೆಸ್ಟ್ ಇಲಾಖೆ 4 ಕೆರೆಗಳನ್ನು ನಿರ್ವಹಿಸುತ್ತಿದೆ ಎಂದು ತಿಳಿಸಿದರು. ಪಾಲಿಕೆ ವಶದಲ್ಲಿರುವ 55 ಕೆರೆಗಳಲ್ಲಿ 153 ಎಕರೆ ಒತ್ತುವರಿಯನ್ನು ಗುರುತಿಸಲಾಗಿದ್ದು, ಅದರಲ್ಲಿ 85 ಎಕರೆ ಒತ್ತುವರಿಯನ್ನು ತೆರೆವುಗೊಳಿಸಲಾಗಿದೆಯೆಂದು ತೆರೆವುಗೊಳಿಸಿದ ಕೆರೆಗಳ ವಿವರಗಳನ್ನು ಸಂಕ್ಷಿಪ್ತವಾಗಿ ಸಭೆಯಲ್ಲಿ ತಿಳಿಸಿದರು. ಉಳಿದಂತೆ ಕೆಲವು ಕಡೆ ಸ್ಲಂ ಹಾಗೂ ದೇವಸ್ಥಾನಗಳು ಮತ್ತು ಚರ್ಚ್‌ಗಳಿರುವುದರಿಂದ ಒತ್ತುವರಿಯನ್ನು ತೆರವುಗೊಳಿಸಲು ವಿಳಂಬವಾಗಿದೆ ಎಂದು ತಿಳಿಸಿದರು.

**ಶ್ರೀಮತಿ.ಕೆ.ಆರ್.ಯಶೋಧಮ್ಮರವರು** ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಬಿಡಿಎ ರವರ ವಶದಲ್ಲಿರುವ ಕೆರೆಗಳನ್ನು ಅಭಿವೃದ್ಧಿಗೊಳಿಸಿದ್ದಾರೆಯೇ ಎಂದು ಪ್ರಶ್ನಿಸಿದರು.

***ಶ್ರೀ.ಸತೀಶ್, ಮುಖ್ಯ ಅಭಿಯಂತರರು(ಕೆರೆಗಳು–ಪರಿಸರಕೋಶ)*** *ರವರು ಮಾತನಾಡುತ್ತಾ,* ಬಿಡಿಎರವರು 12 ಕೆರೆಗಳನ್ನು ಅಭಿವೃದ್ಧಿಗೊಳಿಸಿ ಬಿ.ಬಿ.ಎಂ.ಪಿ.ಗೆ ಹಸ್ತಾಂತರಿಸಿಕೊಳ್ಳುವಂತೆ ತಿಳಿಸಿರುತ್ತಾರೆ. ಆದರೆ, ಕೆರೆಗಳನ್ನು ಅಭಿವೃದ್ಧಿಗೊಳಿಸಲು ಹಣವಿಲ್ಲದ ಕಾರಣ ಹಸ್ತಾಂತರ ಮಾಡಿ ಕೊಂಡಿರುವುದಿಲ್ಲವೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಮೂರು ವರ್ಷದಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ, ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಎಷ್ಟು ಅನುದಾನ ಬಿಡುಗಡೆಯಾಗಿದೆ, ಎಷ್ಟು Spill over work ಆಗಿದೆ, ಮುಂದಿನ ದಿನಗಳಲ್ಲಿ ಎಷ್ಟು ಬೇಕಾಗುತ್ತದೆ ಎಂಬ ವಿವರಗಳನ್ನು ಒಂದು ವಾರದೊಳಗೆ ಮಾಹಿತಿಯನ್ನು ಸಮಿತಿಗೆ ನೀಡುವಂತೆ ತಿಳಿಸಿದರು.

*ಸರ್ಕಾರದ ಆಯವ್ಯಯದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಸಮಗ್ರ ಅಭಿವೃದ್ಧಿಗೊಳಿಸಲು ರೂ.100.00 ಕೋಟಿ ಅನುದಾನ ಲಭ್ಯವಿರುವ ಬಗ್ಗೆ ಮಾಹಿತಿ ಕಂಡು ಬಂದಿದ್ದು, ಆ ಅನುದಾನವನ್ನು ಬಳಸಿಕೊಳ್ಳುವಂತೆ ಸೂಚಿಸಿದರು.*

***ಶ್ರೀ.ಸತೀಶ್, ಮುಖ್ಯ ಅಭಿಯಂತರರು(ಕೆರೆಗಳು–ಪರಿಸರಕೋಶ)*** *ರವರು ಮಾತನಾಡುತ್ತಾ, ಪಾಲಿಕೆ ಕೆರೆಗಳ ಅಭಿವೃದ್ಧಿಗೆ ರೂ. 100.00 ಕೋಟಿ ಅನುದಾನ ಮೀಸಲಿಟ್ಟಿಲ್ಲ, ಬೆಂಗಳೂರಿನಲ್ಲಿರುವ ಎಲ್ಲಾ ಕೆರೆಗಳಿಗೂ ಅನ್ವಯಿಸುತ್ತದೆ. ಅದರಲ್ಲಿ ರೂ.25.00 ಕೋಟಿ ಅನುದಾನ ನೀಡುವಂತೆ ಸರ್ಕಾರದ ಮಟ್ಟದಲ್ಲಿ ಕಡತವು ಪ್ರಕ್ರಿಯೆಯಲ್ಲಿದ್ದು, ಒಂದು ವಾರದೊಳಗೆ ಹಣವು ಬಿಡುಗಡೆಯಾಗ ಬಹುದೆಂದು ತಿಳಿಸಿದರು.*

ಕೆರೆಗಳು–ಪರಿಸರ ಕೋಶ ನಿರ್ವಹಣೆಗೆ ಸಂಬಂಧಪಟ್ಟಂತೆ 2013–14ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಅನುದಾನಕ್ಕೆ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಸಮಿತಿಯ ಅನುಮೋದನೆ ಪಡೆಯುವಂತೆ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಸಾರ್ವಜನಿಕರು ಕಸಕಡ್ಡಿ ಮತ್ತು ಹೂಳು ತುಂಬಿ ಒತ್ತುವರಿ ಮಾಡಿಕೊಳ್ಳದಂತೆ ಕ್ರಮ ವಹಿಸುವುದು ಹಾಗೂ ಕೊಳಚೆ ನೀರು/ಕಲುಷಿತ ನೀರು ಕೆರೆಗೆ ಬರದಂತೆ ನೋಡಿಕೊಳ್ಳಲು ಹಾಗೂ ಒತ್ತುವರಿಯಾಗದಂತೆ ಎಲ್ಲಾ ಕೆರೆಗಳಿಗೆ ಭದ್ರತಾ ವ್ಯವಸ್ಥೆಯನ್ನು ಒದಗಿಸಲು ಹಾಗೂ ಒತ್ತುವರಿಗಳನ್ನು ಗುರುತಿಸಿ ತೆರವುಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.

**ಕಾರ್ಯಪಾಲಕ ಅಭಿಯಂತರರು(ಯೋಜನೆ)**

ಕಾರ್ಯಪಾಲಕ ಅಭಿಯಂತರರು (ಯೋಜನೆ) ಅಡಿಯಲ್ಲಿ 2012–13ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಿರುವ ಉದ್ಯಾನವನಗಳು ಹಾಗೂ ಪ್ರಗತಿಯಲ್ಲಿರುವ ಉದ್ಯಾನವನಗಳ ಮಾಹಿತಿಯನ್ನು ಹಾಗೂ ಉದ್ಯಾನವನಗಳಲ್ಲಿ ಗೇಟ್ ದುರಸ್ಥಿ, ತಂತಿಬೇಲಿ ದುರಸ್ಥಿ, ಬೋರ್‌ವೆಲ್ ದುರಸ್ಥಿ, ಫೌಂಟೇನ್ ದುರಸ್ಥಿ ಕಾಮಗಾರಿಗಳನ್ನು ಗುರುತಿಸಿ ಪಟ್ಟಿ ಮಾಡಿ ಸಮಿತಿಗೆ ವಲಯವಾರು ಮಾಹಿತಿ ನೀಡುವಂತೆ ಸೂಚಿಸಿದರು.

2012–13 ಮತ್ತು 2013–14ನೇ ಸಾಲಿನಲ್ಲಿ ಪೂಜ್ಯ ಮಹಾಪೌರರ ಅನುದಾನ, ಮಾನ್ಯ ಉಪ ಮಹಾಪೌರರ ಅನುದಾನ ಹಾಗೂ ಮಾನ್ಯ ಉಸ್ತುವಾರಿ ಸಚಿವರ ಅನುದಾನ ಮತ್ತು ತೋಟಗಾರಿಕೆ ಸ್ಥಾಯಿ ಸಮಿತಿಗೆ ಕಾಯ್ದಿರಿಸಿರುವ ಅನುದಾನದಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿರುವ ಮತ್ತು ಪ್ರಗತಿಯಲ್ಲಿರುವ ಉದ್ಯಾನವನ ಕಾಮಗಾರಿಗಳ ಬಗ್ಗೆ ವಲಯವಾರು ಮಾಹಿತಿಯನ್ನು ನೀಡುವಂತೆ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ, ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಬಗ್ಗೆ ಕಾರ್ಯನಿರ್ವಹಿಸಲು ಅಧಿಕಾರಿಗಳ ಸಲಹೆ, ಸೂಚನೆಗಳು ಸಮಿತಿಗೆ ಅಮೂಲ್ಯವಾಗಿದ್ದು, ಅಧಿಕಾರಿಗಳು ತಮ್ಮ ಸಲಹೆ ಸಹಕಾರಗಳನ್ನು ಸಮಿತಿಗೆ ನೀಡುವಂತೆ ಹಾಗೂ ತಮ್ಮ

ಕಾರ್ಯವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ಸಮಸ್ಯೆಗಳು ಹಾಗೂ ಕುಂದುಕೊರತೆಗಳಿದ್ದರೂ ಸಹ ಸಮಿತಿಗೆ ವರದಿ ಮಾಡುವಂತೆ ಸೂಚಿಸುತ್ತಾ, ಸಮಿತಿಯಲ್ಲಿ ಉತ್ತಮ ಗುಣಮಟ್ಟದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತಮ್ಮೆಲ್ಲರ ಸಲಹೆ, ಸಹಕಾರಗಳು ಅತ್ಯಮೂಲ್ಯವಾಗಿದ್ದು, ಜೊತೆಗೆ ಸಮಿತಿಯ ಸಹಕಾರವು ಇರುತ್ತದೆಂದು ತಿಳಿಸಿದರು.

ಸಮಿತಿಯಿಂದ ಸಭೆಯ ತಿಳುವಳಿಕೆ ಪತ್ರವನ್ನು ಒಂದು ವಾರಕ್ಕೆ ಮುಂಚಿತವಾಗಿ ಹೊರಡಿಸಲಾಗುತ್ತದೆ. ಸಮಿತಿಯು ಕೇಳುವ ವಿವರಗಳಿಗೆ ಮಾಹಿತಿಯನ್ನು ಸಕಾಲದಲ್ಲಿ ಮಾಹಿತಿಯನ್ನು ಒದಗಿಸಿ, ಎಲ್ಲಾ ಆಧಿಕಾರಿಗಳು ನಿಗಧಿತ ಸಮಯದೊಳಗೆ ಸಭೆಗೆ ಹಾಜರಿರುವಂತೆ ಅಧ್ಯಕ್ಷರು ಸೂಚಿಸಿದರು.

ಕೊನೆಯದಾಗಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮೇಲಿನ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಕ್ರಮ ವಹಿಸಲು, ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು<br>
ತೋಟಗಾರಿಕೆ ಸ್ಥಾಯಿ ಸಮಿತಿ<br>
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು :-</u>**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಗೌರವಾನ್ವಿತ ಸಮಿತಿಯ ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರಿಗೆ ಕಳುಹಿಸಲಾಗಿದೆ.*
- ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ *ರವರಿಗೆ ಕಳುಹಿಸಲಾಗಿದೆ.*
- *ಮುಖ್ಯ ಅಭಿಯಂತರರು(ಕೆರೆಗಳು–ಪರಿಸರಕೋಶ)ರವರಿಗೆ ಕಳುಹಿಸಲಾಗಿದೆ.*
- ಕಛೇರಿ ಪ್ರತಿ